ಕುಟುಂಬದ್ದು ಎಂದು ಹೇಳುತ್ತಿದ್ದೀರಿ. ಸಾಧಾರಣವಾಗಿ ಒಂದೇ ಕುಟುಂಬದ ಸಲುವಾಗಿ ಇಂತಹ ಒಂದು ಯೋಜನೆಯನ್ನು ಕೈಗೊಳ್ಳುವುದಕ್ಕಾಗುವುದಿಲ್ಲ. ಆದಾಗ್ಯೂ ಕೂಡಾ 41 ಕುಟುಂಬಗಳಿಗೆ ಅನುಕೂಲ ಆಗುವ ಒಂದು ನೀರಾವರಿ ಯೋಜನೆ ಎಂದು ನನಗೆ ಸಿಕ್ಕ ಮಾಹಿತಿ ಪ್ರಕಾರ ತಿಳಿದು ಬಂದಿದೆ. ಈ ಯೋಜನೆ ಜಿಲ್ಲಾಪರಿಷತ್ ವ್ಯಾಪ್ತಿಗೆ ಒಳಪಟ್ಟಿದ್ದು, ನಮ್ಮ ಮೈನರ್ ಇರಿಗೇಷನ್ ಇಲಾಖೆಗೆ ಒಳಪಟ್ಟಿಲ್ಲ. ಇದು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಇರುವುದರಿಂದ ನಿಧಾನವಾಗಿ ಈ ಮಾಹಿತಿಗಳು ಸಿಗುತ್ತಿವೆ. ಮತ್ತೆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಹೇಳಿದ್ದೀರಿ. ಈಗಾಗಲೇ ಈ ವಿಚಾರ ಲೋಕಾಯುಕ್ತ ಮುಂದೆ ಇರುವುದರಿಂದ ಇದರ ಬಗ್ಗೆ ಸೂಕ್ತ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ. ಮತ್ತೆ 5 ಲಕ್ಷ ರೂಪಾಯಿ ಪರಿಹಾರದ ಬಗ್ಗೆ ಹೇಳಿದ್ದೀರಿ. ಅದನ್ನು ತಡೆಹಿಡಿಯುತ್ತೇನೆಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಜಿಲ್ಲಾಪರಿಷತ್ತು ಹಾಗೂ ಸಣ್ಣ ನೀರಾವರಿ ಇಲಾಖೆ ಎಂದು ಹೇಳುತ್ತಿದ್ದೀರಿ. ಹಣವನ್ನು ವಿತರಣೆ ಮಾಡುವುದಕ್ಕೆ ನಾವು ಮಾಡಿರತಕ್ಕ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ತು ಎಂದು ಮಾಡಿರತಕ್ಕದ್ದು. ಆದರೆ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ನ್ ಸರ್ಕಾರಕ್ಕೆ ಬರಬೇಕು. ತಾವು ಸಣ್ಣ ನೀರಾವರಿ ಖಾತೆ ಸಚಿವರು ಆಗಿದ್ದೀರಿ. ತಮಗೆ ಇದರ ಬಗ್ಗೆ ಕಂಟ್ರೋಲ್ ಇದೆ. ತಮಗೆ ಅಧಿಕಾರ ಇದೆ. ಜಿಲ್ಲಾಪರಿಷತ್ತು ಆದಾಕ್ಷಣ ತಾವು ಮಾಡಬಾರದು ಎಂದು ಇಲ್ಲ. ಇಲ್ಲಿ ಮುಖ್ಯವಾಗಿ ಬಂದರಿತಕ್ಕದ್ದು ಏನೆಂದರೆ ಎಂಜಿನಿಯರಿಂಗ್ ಇಲಾಖೆಯವರು, ಅಸಿಸ್ಟೆಂಟ್ ಕಮೀಷನರ್ ಶಾಮೀಲಾಗಿ 5 ಲಕ್ಷ ರೂಪಾಯಿಗಳ ಮುಗಿಯತಕ್ಕ ಕೆಲಸಕ್ಕೆ ಸುಮಾರು 40 ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರಾದ್ದರಿಂದ ಹಣ ದುರ್ವ್ಯವಹಾರವಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು. ಈ ವಿಚಾರ ಲೋಕಾಯುಕ್ತಕ್ಕೆ ಹೋಗಿದೆ. ಅದ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ತಾವು ಹೇಳತಕ್ಕ ಪ್ರಕಾರವೇ ಸಲೇಷನ್ ಸೇರಿಕೊಂಡರೂ 3 ಲಕ್ಷ ರೂಪಾಯಿ ಆಗುವುದಿಲ್ಲ. ತಾವು ಉತ್ತರದಲ್ಲಿ ಎಕರೆಗೆ 15 ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ಇದರಿಂದ 12 ಎಕರೆಗೆ ಎಷ್ಟು ಆಗುತ್ತದೆ? 12 ಲಕ್ಷ ಆಗುತ್ತದೆಯೇ? ಎಕರೆಗೆ 15 ಸಾವಿರ ಅಲ್ಲ, 85 ಸಾವಿರದಂತೆ ಕೊಟ್ಟಿದ್ದಾರೆ. ದಯಮಾಡಿ ಯಾರೊಬ್ಬರನ್ನಾದರೂ ಸಸ್ಪೆಂಡ್ ಮಾಡಿ. ಆಗ ಬುದ್ಧಿ ಬರುತ್ತದೆ. ಇದರಿಂದ ಮುಂದೆ ಆಗುವ ತಪ್ಪು ತಪ್ಪುತ್ತದೆ. ಮತ್ತು ಈ ಬಗ್ಗೆ ಸಮಗ್ರವಾದ ವಿಚಾರಣೆ ಮಾಡುವ ಬಗ್ಗೆ ಆಶ್ವಾಸನೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಡಾ॥ ಆರ್.ಬಿ. ಚೌಧ: ಮಾನ್ಯ ಅಧ್ಯಕ್ಷರೇ, ಪರಿಹಾರ ಕೊಟ್ಟಿದ್ದು ಸಲೇಷನ್ ಸೇರಿ; ಗಿಡ, ಮರ, ಬಾವಿ ಎಲ್ಲಾ ಕೂಡಿಸಿ 11 ಲಕ್ಷ ರೂಪಾಯಿ ಆಗಿದೆ. ಅದರ ಪ್ರಕಾರ ಕೊಟ್ಟಿದ್ದು ಆಗಿದೆ. ಆಗಲೇ ನಾನು ಹೇಳಿದ ಹಾಗೆ ಇದು ಲೋಕಾಯುಕ್ತ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪರಿಶೀಲನೆ ಮಾಡಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

**ತಿರುಪತಿ ತಿರುಮಲೆಯ ಅತಿಥಿ ಗೃಹಗಳ ಸಂಖ್ಯೆ ಕುರಿತು**

454. ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ): ಮಾನ್ಯ ಕಾನೂನು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಶ್ರೀ ತಿರುಮಲ ತಿರುಪತಿ ಕ್ಷೇತ್ರ ಪ್ರದೇಶದಲ್ಲಿ ಇರತಕ್ಕಂಥ ಸರ್ಕಾರದ ವಸತಿ ಗೃಹಗಳು ಎಷ್ಟು?*

*ಆ) ರಾಜ್ಯದಿಂದ ಅಲ್ಲಿಗೆ ಹೋಗತಕ್ಕಂತ ಯಾತ್ರಿಕರ ಸಂಖ್ಯೆಗನುಗುಣವಾಗಿ ವಸತಿ ಗೃಹಗಳನ್ನು ಕಲ್ಪಿಸಲಾಗಿದೆಯೇ?*

ಇ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಈ) ಗಣನೀಯ ಸಂಖ್ಯೆಯಲ್ಲಿ ಶಾಖ್ಯದಿಂದ ಅಲ್ಲಿಗೆ ಹೋಗುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಇನ್ನಷ್ಟು ವಸತಿಗೃಹಗಳನ್ನು ಕಟ್ಟಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?

ಉ) ಹಾಗಿದ್ದಲ್ಲಿ ಆ ಬೇಡಿಕೆಯನ್ನು ಯಾವಾಗ ಈಡೇರಿಸಲಾಗುವುದು?

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು): ಅ) ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರದಲ್ಲಿರುವ ವಸತಿ ಗೃಹಗಳ ವಿವರ)

| | | |
|---|---|---|
| 1) | ಕರ್ನಾಟಕ ಪ್ರವಾಸಿ | 50 ಕೊಠಡಿಗಳು |
| 2) | ಕರ್ನಾಟಕ ಕಲ್ಯಾಣ ಮಂಟಪ | 24 ಕೊಠಡಿಗಳು |
| 3) | ಕಾಟೇಜುಗಳು (17) | 48 ಕೊಠಡಿಗಳು |
| 4) | ಅತಿಥಿ ಗೃಹ | 8 ಕೊಠಡಿಗಳು |
| 5) | ನಿರೀಕ್ಷಣ ಭವನ | 2 ಕೊಠಡಿಗಳು |

ಆ) ಯಾತ್ರಿಗಳ ಸಂಖ್ಯೆ ಇಷ್ಟೆ ಎಂಬುದು ನಿರ್ಧರಿಸಲು ಮಾಹಿತಿ ಲಭ್ಯವಿಲ್ಲ. ಸಾಧ್ಯವಾದಷ್ಟು ಸೌಲಭ್ಯ ಒದಗಿಸಲಾಗಿದೆ.

ಇ) ಸಾಕಷ್ಟು ಜಾಗದ ಕೊರತೆ

ಈ) ಹೌದು

ಉ) ಟಿ.ಟಿ.ಡಿ ಪ್ರಾಧಿಕಾರದಿಂದ ಅಸಮತಿ ದೊರೆತ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಲಕ್ಷ್ಮಣ್ಣ: ಮಾನ್ಯ ಅಧ್ಯಕ್ಷರೇ, ಶ್ರೀ ತಿರುಮಲ ತಿರುಪತಿ ಕ್ಷೇತ್ರದಲ್ಲಿ ಕರ್ನಾಟಕ ಸರ್ಕಾರದ ವಸತಿಗೃಹಗಳ ಸಂಖ್ಯೆ 130 ಎಂದು ಹೇಳಿದ್ದಾರೆ. ಅದರಲ್ಲಿ 50 ವಸತಿಗೃಹಗಳನ್ನು ಕರ್ನಾಟಕ ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಟ್ಟಿದ್ದು, ಉಳಿದವು 80 ಮಾತ್ರ. ರಾಜ್ಯದಿಂದ ಅಲ್ಲಿಗೆ ಸಾವಿರಾರು, ಯಾತ್ರಾರ್ಥಿಗಳು ಹೋಗುತ್ತಿದ್ದು, ಇವು ಸಾಲುವುದಿಲ್ಲ. ಇನ್ನೂ ಹೆಚ್ಚು ಕಟ್ಟಬೇಕಾಗಿದೆ. ಈ ದಿಸೆಯಲ್ಲಿ ಒಬ್ಬ ಸ್ಪೆಷಲ್ ಆಫೀಸರ್ ವಸತಿ ಗೃಹ ಕಟ್ಟತಕ್ಕ ದಾನಿಗಳನ್ನು ಕೂಡಿಸಿ ಪ್ಲಾನ್ ಕೊಟ್ಟರೆ ಅಲ್ಲಿನ ಒಬ್ಬ ಅಧಿಕಾರಿ ಹಕ್ಕುಪತ್ರ ಇಲ್ಲ ಎಂದು ರಿಜೆಕ್ಟ್ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಅದನ್ನು ಪರಿಶೀಲಿಸಿ ಪ್ಲಾನ್ ಸ್ಯಾಂಕ್ಷನ್ ಮಾಡಿದರೆ ಅಲ್ಲಿ 100 ವಸತಿಗೃಹಗಳನ್ನು ಕಟ್ಟಬಹುದು. ಈ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ?

ಶ್ರೀ ಹಾರನಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ಮಾತು ನಿಜ. ಲಕ್ಷಾವಧಿ ಯಾತ್ರಿಕರು ಅಲ್ಲಿಗೆ ಹೋಗುತ್ತಿದ್ದಾರೆ. ಅವರಿಗೆ ಅಲ್ಲಿ ಈಗಿರತಕ್ಕ ವಸತಿಗೃಹಗಳು ಸಾಲದು. ಅದಕ್ಕಾಗಿ 103 ಕೊಠಡಿಗಳ ಒಂದು ಸಂಕೀರ್ಣ ಕಟ್ಟುವುದಕ್ಕೆ ಸರ್ಕಾರ ಎಲ್ಲಾ ತಯಾರಿ ನಡೆಸಿದೆ. ಅಲ್ಲಿ ಇರುವ ಅಧಿಕಾರ ವರ್ಗದವರೂ ಕೂಡ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಶ್ರೀ ತಿರುಮಲ ತಿರುಪತಿ ಕ್ಷೇತ್ರ ದೇವಸ್ಥಾನದ ಸಮಿತಿಯು ಒಪ್ಪಿಗೆ ಕೊಡಬೇಕೆಂದು ಸರ್ಕಾರ ಕೇಳಿದೆ. ನಿನ್ನೆ ದಿವಸ ಆ ಸಮಿತಿಯ ಅಧ್ಯಕ್ಷರು, ನಮ್ಮ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಹತ್ತಿರ ಸೋಧಿ ಮಠಕ್ಕೆ ಬಂದಿದ್ದರು. ಅಲ್ಲಿ ನಾನು ಈ ಬಗ್ಗೆ ಅವರ ಹತ್ತಿರ ವಿಸ್ತಾರವಾದ ಮಾತುಕತೆ ನಡೆಸಿದ್ದೇನೆ. ನಮ್ಮ ಧಾರ್ಮಿಕ ದತ್ತಿ ಆಯುಕ್ತರು ಸಹಾ ಖುದ್ದಾಗಿ ಹೋಗಿ ಹೇಳಿದ್ದಾರೆ. ಅವರಿಂದ ಸಧ್ಯದಲ್ಲೇ ಒಪ್ಪಿಗೆ ದೊರೆಯುವ ಸಂಭವ ಇದೆ. ಒಪ್ಪಿಗೆ ದೊರೆತ ತಕ್ಷಣವೇ ನಾವು ಈ ಕೆಲಸ ಮಾಡುವುದಕ್ಕೆ ಸಿದ್ಧ ಇದ್ದೇವೆ. ಒಂದು ದೋಷ ಏನೆಂದರೆ ಪ್ರತಿ ಸಾರಿ ಕರ್ನಾಟಕದ ಪರವಾಗಿ ಮುಖ್ಯ

ತಿರುಪತಿ ತಿರುಮಲ ದೇವಸ್ಥಾನ ಸಮಿತಿಯಲ್ಲಿ ಒಬ್ಬರು ಸದಸ್ಯರು ಇರುತ್ತಿದ್ದರು. ಈಗ ಹಾಲಿ ಸಮಿತಿಯಲ್ಲಿ ನಮ್ಮ ಸದಸ್ಯರು ಇಲ್ಲ ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಇಬ್ಬರೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ಒಬ್ಬರಾದರೂ ಕರ್ನಾಟಕದ ಸದಸ್ಯರು ಸಮಿತಿಯಲ್ಲಿ ಇರಬೇಕೆಂದು ಕೇಳಿಕೊಂಡಿದ್ದೇವೆ. ಅದು ಅವರ ಪರಿಶೀಲನೆಯಲ್ಲಿದೆ ಎಂದು ಭಾವಿಸುತ್ತೇನೆ. ಹಾಗೆ ಅದರೆ ಕರ್ನಾಟಕ ಸರ್ಕಾರದ ಹಕ್ಕು ಮತ್ತು ಅಲ್ಲಿಗೆ ಹೋಗತಕ್ಕ ನಮ್ಮ ಭಕ್ತಾಧಿಗಳಿಗೆ ಅನುಕೂಲ ಮಾಡುವುದಕ್ಕೆ ಸಾಕಷ್ಟು ಸೌಲಭ್ಯಗಳನ್ನು ನಾವು ಒದಗಿಸಬಹುದು.

12 45 ಪಿ.ಎಂ

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೇ, ನಾವು ಕೇಳುವುದಿಲ್ಲ. ಒತ್ತಾಯ ಮಾಡಬೇಕು. ಇದು ಕೃಷ್ಣದೇವರಾಯನ ಕಾಲದಿಂದ, ಸಾವಿರಾರು ವರ್ಷಗಳಿಂದ, ಬಂದಿರತಕ್ಕ ನಮ್ಮ ಹಕ್ಕು. ಮೊದಲನೇ ಪೂಜೆ ನಮ್ಮ ಕರ್ನಾಟಕದಿಂದ ಆಗಬೇಕು, ಇದು ಮಹಾರಾಜರ ಕಾಲದಲ್ಲೇ ತೀರ್ಮಾನ ಆಗಿದೆ. ಆದರೆ, ಇದಕ್ಕೆ ಹಕ್ಕುಪತ್ರ ಇಲ್ಲವೆಂದು ಒಬ್ಬ ಅಧಿಕಾರ ರಿಜಿಸ್ಟ್ ಮಾಡುವುದಾದರೆ, ತುಂಬಾ ಅವಮಾನ. ಈ ದಿಸೆಯಲ್ಲಿ ಮಾನ್ಯಮಂತ್ರಿಗಳು ಖುದ್ದಾಗಿ ಹೋಗಿ, ನಕ್ಷೆಯನ್ನು ಮಂಜೂರ್ಮಾಡಿಸಿಕೊಟ್ಟು ಕಟ್ಟಡಗಳನ್ನು ಬೇಗ ಕಟ್ಟತಕ್ಕ ವ್ಯವಸ್ಥೆ ಮಾಡಬೇಕೆಂದು ಈ ಸಭೆಯ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ನಿಜವಾಗಿದೆ. ಸರ್ಕಾರ ಈ ಬಗ್ಗೆ ಸರ್ವಪ್ರಯತ್ನವನ್ನು ಮಾಡುತ್ತಿದೆ, ಒತ್ತಾಯವನ್ನೂ ಹಾಕುತ್ತಿದೆ. ಆಂಧ್ರ ಮುಖ್ಯಮಂತ್ರಿಯವರಿಗೂ ತಿಳಿಸಿ, ಅವರಿಂದಲೂ ಕೂಡ ಒತ್ತಾಯವನ್ನು ಹಾಕಿಸಿ, ಆ ಸಮಿತಿಯಿಂದ ಆದಷ್ಟು ಬೇಗ ಅನುಮತಿ ದೊರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಕುರಿತು**

501 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ನೂತನ ಕಟ್ಟಡ ನಿರ್ಮಾಣ ಕಾರ್ಯವನ್ನು ಎಂದು ಆರಂಭಿಸಲಾಗಿದೆ?*

*ಆ) ಆ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚವೆಷ್ಟು?*

*ಇ) ಆ ಕಟ್ಟಡವನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?*

*ಈ) ಆ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಕಾರಣಗಳೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಮೊದಲನೇ ಹಂತದ ಕಾಮಗಾರಿಯನ್ನು ದಿನಾಂಕ 20-9-85ರಲ್ಲಿ ಆರಂಭಿಸಲಾಗಿರುತ್ತದೆ.

ಆ) ಮೂರು ಹಂತಕ್ಕೆ ಮಂಜೂರಾದ ಅಂದಾಜು ರೂ. 222.00 ಲಕ್ಷ ರೂ.ಗಳು (ಮೊದಲನೇ ಹಂತದ ಅಂದಾಜು ಮೊತ್ತ 82.60 ಲಕ್ಷ ರೂ.ಗಳು)

ಇ) ಮೊದಲನೇ ಹಂತದ ಕಾಮಗಾರಿ ಈಗ ಪೂರ್ಣಗೊಂಡಿರುತ್ತದೆ. ಉಳಿದ ಎರಡನೇ ಹಂತದ ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.